ದಿನಾಂಕಃ 14-12-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀ ಸವಾಲು ಶ್ರೀಯುತ ಎಸ್ ಸಿ ಜಿ ವಕೀಲರಿಂದಃ

1. ನನಗೆ ಹನಮಂತ ಎಂಬ ಹೆಸರಿನಿಂದ ಕರೆಯುತ್ತಾರೆ ಎಂದರೆ ಸರಿ. ಪ್ರಶಾಂತ ಲಾಡ್ಜ ಇರುವ ಜಾಗೆಯಲ್ಲಿ ನಾನು 4 ವರ್ಷಗಳ ಹಿಂದೆ ಶುಭಂ ಪ್ಯಾಶನ ಎಂಬ ಬಟ್ಟೆ ಅಂಗಡಿಯನ್ನು ತೆಗೆದಿರುತ್ತೇನೆ. ಪ್ರಶಾಂತ ಲಾಡ್ಜ ಇದ್ದುದ್ದರಿಂದ ಶುಭಂ ಅಂಗಡಿಯಾಗಿ ಪರಿವರ್ತಿಸಲಾಗಿದೆ ಎಂದರೆ ಸಾಕ್ಷಿ ರಸ್ತೆ ಅಗಲೀಕರಣದಲ್ಲಿ ಪ್ರಶಾಂತ ಲಾಡ್ಜ ಇದ್ದ ಜಾಗೆ ಸಂಪೂರ್ಣವಾಗಿ ಕೆಡವಲಾಗಿ ಅದರಲ್ಲಿ ಇದ್ದ ಜಾಗೆಯಲ್ಲಿ ಶುಭಂ ಅಂಗಡಿಯನ್ನು ತೆಗೆಯಲಾಗಿದೆ ಎಂದು ನುಡಿದಿರುತ್ತಾರೆ. ರಸ್ತೆ ಅಗಲೀಕರಣಕ್ಕೆ ಪ್ರಶಾಂತ ಲಾಡ್ಜ 1 ಅಡಿ ಮಾತ್ರ ಹೊಗಿದೆ ಎಂದರೆ ಸಾಕ್ಷಿ 9 ಅಡಿ ಹೊಗಿದೆ ಎಂದು ನುಡಿದಿರುತ್ತಾರೆ. ಪ್ರಶಾಂತ ಲಾಡ್ಜ ಕಟ್ಟಡ 3 ಸಿ ಟಿ ಎಸ್ ನಂಬರಗಳ ಮೇಲೆ ಇತ್ತು ಎಂದರೆ ಸರಿ.

2. ದಾವಾ ಐಟಮ ನಂ.5 ರಿಂದ 7 ಇವುಗಳ ಮೇಲೆ ಪ್ರಶಾಂತ ಲಾಡ್ಜನ್ನು ಕಟ್ಟಲಾಗಿತ್ತು ಎಂದರೆ ಸರಿ. ದಾವಾ ಐಟಮ ನಂ.5 ನಮ್ಮ ಕುಟುಂಬದ ಮೂಲ ಆಸ್ತಿ ಎಂದರೆ ಸಾಕ್ಷಿ ನಮ್ಮ ತಂದೆಯ ಆಸ್ತಿ ಎಂದು ನುಡಿದಿರುತ್ತಾರೆ. ದಾವಾ ಐಟಮ ನಂ.6 ನ್ನು ಮೊದಲನೆ ಪ್ರತಿವಾದಿ 1989 ರಲ್ಲಿ ಖರೀದಿಸಿದ್ದಾರೆ ಎಂದರೆ ಸಾಕ್ಷಿ ನಾನು ಮತ್ತು ಆತ ಕೂಡಿಯೇ ಖರೀದಿಸಿದ್ದಾರೆಂದು ನುಡಿದಿರುತ್ತಾರೆ. ನಾನು 1964 ರಲ್ಲಿ ಜನಿಸಿದ್ದೇನೆ ಎಂದರೆ ಸರಿ. ದಾವಾ ಐಟಮ ನಂ.6 ರ ಈಗೀನ ಉತಾರ ಮೊದಲನೆ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ದಾವಾ ಐಟಮ ನಂ.5 ನ್ನು 1979-89 ರಲ್ಲಿ ಗೋಕಾಕ ಅರ್ಬನ ಕೊ ಆಫ್ ರೆಟೀವ್ ಬ್ಯಾಂಕ ಮತ್ತು ಸಿಂಡಿಕೇಟ ಬ್ಯಾಂಕ ಗೋಕಾಕದಲ್ಲಿ ಅಡಮಾನ ಇಡಲಾಗಿತ್ತು ಎಂದರೆ ಸರಿ. ಪ್ರಶಾಂತ ಲಾಡ್ಜ ನ್ನು 1981 ರಲ್ಲಿ ಕಟ್ಟಿಸಲಾಗಿತ್ತು ಎಂದರೆ ಸರಿ. ಆಗ ನಾನು ಎಸ್ ಎಸ್ ಎಲ್ ಸಿ ಓದುತ್ತಿದ್ದೆ ಎಂದರೆ ಸಾಕ್ಷಿ ಪಿ ಯು ಸಿ 1 ನೇ ತರಗತಿಯಲ್ಲಿ ಓದುತ್ತಿದ್ದೆ ಎಂದು ನುಡಿದಿರುತ್ತಾರೆ. ಸಿ ಟಿ ಎಸ್ ಸಂಖ್ಯೆ 3226 ನ್ನ ಅಜ್ಜ ಕೊನಪ್ಪ ಶಂಕರೆಪ್ಪ ಅಂಕದವರ ಆಸ್ತಿಯಾಗಿತ್ತು ಎಂದರೆ ನನಗೆ ಮಾಹಿತಿ ಇಲ್ಲ. ಆತ ದಿಃ 11-08-1952 ರಂದು ತೀರಿಕೊಂಡಿದ್ದಾನೆ ಎಂದರೆ ನನಗೆ ಮಾಹಿತಿ ಇಲ್ಲ. ತದ ನಂತರ ಮೊದಲನೆ ಪ್ರತಿವಾದಿಯ ಹೆಸರು ಸದರಿ ಆಸ್ತಿಗೆ 17-04-1958 ರಂದು ದಾಖಲಾಯಿತು ಎಂದರೆ ನನಗೆ ಮಾಹಿತಿ ಇಲ್ಲ .

3. ನಾವು ಒಟ್ಟು 8 ಜನ ಅಣ್ಣ ತಮ್ಮಂದಿರು ಎಂದರೆ ಸರಿ. 10 ನೇ ಪ್ರತಿವಾದಿ ನನ್ನ ಅಣ್ಣ ಎಂದರೆ ಸರಿ. ಸಿ ಟಿ ಸಿ ಸಂಖ್ಯೆ 3226 ಕ್ಕೆ ಮೊದಲನೆ ಪ್ರತಿವಾದಿ ದಿಃ 22-08-1977 ರಂದು ನಮ್ಮ ಎಲ್ಲಾ ಅಣ್ಣ ತಮ್ಮಂದಿರು ಹೆಸರನ್ನು ದಾಖಲಿಸಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಆಸ್ತಿಯನ್ನು ಗೋಕಾಕದ ಅರ್ಬನ ಬ್ಯಾಂಕ ಮತ್ತು ಸಿಂಡಿಕೇಟ ಬ್ಯಾಂಕಗೆ ಅಡಮಾನ ಮಾಡಿ ದಾವಾ ಐಟಮ ನಂ.6 ಮತ್ತು 7 ನ್ನು ಖರೀಸಲಾಗಿದೆ ಎಂದರೆ ಸರಿಯಲ್ಲ. ಪ್ರಶಾಂತ ಲಾಡ್ಜನ್ನು ನಡೆಸಲು ಮೊದಲನೆ ಪ್ರತಿವಾದಿಗೆ ಪಾಲುದಾರಿಕಾ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಿಃ 01-04-1992 ರಂದು ಪ್ರಶಾಂತ ಲಾಡ್ಜಗೆ ಸಂಬಂಧಪಟ್ಟಂತೆ ನಾನು, ಮೊದಲನೆ ಪ್ರತಿವಾದಿ, 7 ನೇ ಪ್ರತಿವಾದಿ ಹಾಗೂ 2 ಮತ್ತು 10 ನೇ ಪ್ರತಿವಾದಿಯ ಹೆಂಡತಿಯರು ಸೇರಿ ಪಾಲುದಾರಿಕಾ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿ ಅದು ತಪ್ಪಾಗಿದೆ ಎಂದು ನುಡಿದಿರುತ್ತಾರೆ. ದಿಃ 18-08-1993 ರಂದು ಸದರಿ ಪ್ರಶಾಂತ ಲಾಡ್ಜಗೆ ಸಂಬಂಧಪಟ್ಟಂತೆ ಪಾಲುದಾರಿಕೆಯನ್ನು 4 ನೇ ಪ್ರತಿವಾದಿ ಮತ್ತು ಮೃತ ಬಸವರಾಜ ಸೇರಿಸಿಕೊಂಡಿದ್ದೇವೆ ಎಂದರೆ ಅದು ಸುಳ್ಳು ಎಂದು ನುಡಿದಿರುತ್ತಾರೆ. ಸದರಿ ಪಾಲುದಾರಿಕಾ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿ ಅದನ್ನು ಪೋಕಳ ಮಾಡಿಕೊಂಡಿದ್ದು ನಾನು ಗೊತ್ತಿಲ್ಲದೆ ಸಹಿ ಮಾಡಿರಬಹುದು ಎಂದು ನುಡಿದಿರುತ್ತಾರೆ. ಸದರಿ ಪಾಲುದಾರಿಕಾ ಪತ್ರವನ್ನು ಪೋಕಳ ಎಂದು ಹೇಳಿ ನಾನು ಎಲ್ಲಿಯೂ ಪ್ರಶ್ನಿಸಿಲ್ಲ ಕಾರಣ ಅದರ ಬಗ್ಗೆ ನನಗೆ ಗೊತ್ತಿರಲಿಲ್ಲ.

4. ನಾನು ಮೊದಲ ಬಾರಿಗೆ ಪ್ರಶಾಂತ ಲಾಡ್ಜಗೆ ಸಂಬಂಧಪಟ್ಟಂತೆ 2011-12 ರಲ್ಲಿ ಆದಾಯ ತೆರಿಗೆ ಸಲ್ಲಿಸಿದ್ದೆ ಎಂದರೆ ಸಾಕ್ಷಿ ಅದಕ್ಕಿನ ಮೊದಲೆ ಸಲ್ಲಿಸಿದ್ದೆ ಆದರೆ ಆ ಬಗ್ಗೆ ದಾಖಲಾತಿಗಳು ಇಲ್ಲ ಎಂದು ನುಡಿದಿರುತ್ತಾರೆ. ನನಗೆ ಅದಕ್ಕಿನ ಮೊದಲಿನ ದಾಖಲಾತಿಗಳು ಲಬಿಸಿದರೆ ನಾನು ಅವುಗಳನ್ನು ಹಾಜರು ಮಾಡಬಲ್ಲೆ. ನನಗೆ 2012 ಕ್ಕಿಂತ ಮೊದಲು ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿರುವ ಆಸ್ತಿಗಳನ್ನು ಪ್ರಶಾಂತ ಲಾಡ್ಜ ಆದಾಯದಿಂದ ಖರೀದಸಿದು ಎಂದರೆ ಸರಿಯಲ್ಲ. ನಿಡಿ-12 ಆದ ನನ್ನ ಮಗ ಸಚೀನ ಮತ್ತು ಸುಶೀಲ ಎಮ್ ಬಿ ಎ ಹಾಗೂ ವೈಧ್ಯ ವೃತ್ತಿ ಕಲಿಯುತ್ತಿದ್ದರು ಎಂದರೆ ಸರಿ.

5. ಪ್ರತಿವಾದಿ ನಂ.12 ರಿಂದ 14 ಖರೀಸಿದ ಆಸ್ತಿಗಳು ಅವರ ಸ್ವಂತ ಗಳಿಕೆ ಆಸ್ತಿಗಳು ಅಲ್ಲ ಎಂದರೆ ಸಾಕ್ಷಿ ನಾನು ಅವುಗಳಿಗೆ ಹಣ ನೀಡಿದ್ದು ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಗೆ ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿ ಆತನಿಗೆ ವಯಸ್ಸಾಗಿದ್ದು ಕಿವಿ ಕೇಳುವುದಿಲ್ಲ ಮತ್ತು ನಡೆದಾಡಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. ಮೊದಲನೆ ಪ್ರತಿವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಹೇಳಬುದು ಎಂದರೆ ಸರಿಯಲ್ಲ. ಮೊದಲನೆ ಪ್ರತಿವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಹೇಳಿದರೆ ನನಗೆ ತೊಂದರೆಯಾಗುತ್ತದೆ ಎಂದು ಹೇಳಿ ಉದ್ದೇಶ ಪೂರ್ವಕವಾಗಿ ಆತನ ಸಾಕೆ ಮಾಡಿಸಿಲ್ಲ ಎಂದರೆ ಸಾಕ್ಷಿ ಆತನಿಗೆ ಬಹಳ ವಯಸ್ಸಾಗಿದೆ ಎಂದು ನುಡಿದಿರುತ್ತಾರೆ.

6. ದಾವಾ ಐಟಮ ನಂ.5 ರಿಂ 7 ನನ್ನ ತಂದೆ ಮಾದಲನೆ ಪ್ರತಿವಾದಿ ನನಗೆ ಬಕ್ಕಿಸ್ಸು ಮಾಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಉಳಿದ ಅಣ್ಣ ತಮ್ಮಂದಿರಿಗೆ ಮೊದಲನೆ ಏನು ಬಕ್ಸಿಸು ಕೊಟ್ಟಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನಾನು ಸದರಿ ಬಕ್ಸಿಸು ಪತ್ರವನ್ನು ಖೊಟ್ಟಿಯಾಗಿ ಸೃಷ್ಟಿಸಿದ್ದು ಅದರ ನಿಜ ಪ್ರತಿ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಬಕಿಸ್ಸು ಪತ್ರಕ್ಕೆ ಸಾಕ್ಷಿದಾರರಾದ ಮಸ್ತಾನ ಜಮಾದರ ಕೆಳದ 30 ವರ್ಷಗಳಿಂದ ನನ್ನ ಬಳಿ ಕೆಲಸಕ್ಕೆ ಇದ್ದಾನೆ ಎಂದರೆ ಸರಿ. ನಾನು ಮತ್ತು ಬಕ್ಸಿಸು ಪತ್ರ ಸಾಕ್ಷಿದಾರರು ಶಾಮಿಲಾಗಿ ಅದನ್ನು ಖೊಟ್ಟಿಯಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನನಗೆ ಯಾವುದೆ ಆದಾಯ ಇಲ್ಲದೆ ಇದ್ದರೂ ಮೊದಲನೆ ಪ್ರತಿವಾದಿಗೆ ಮೋಸ ಮಾಡಿ ನಾನ ಆಸಿತ ಹೊಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. 1982 ರಿಂದ 2010-11 ವರೆಗೆ ನಾನು ಎಸ್.ಟಿ ಡಿ ಬೂತ್, ಹೌಸವೇಲ್ ಪಟಾಕಿ ವ್ಯವಹಾರ ಮತ್ತು ಬಿ ಎಸ್ ಎನ್ ಎಲ್ ವ್ಯವಹಾರ ಮಾಡುತ್ತಿದ್ದೆ. ನಾನು ಪ್ರಶಾಂತ ಲಾಡ್ಜನ್ನು ಹೊರತು ಪಡಿಸಿ ಬೇರೆ ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಐಟಮ ನಂ.5 ರಿಂದ 7 ರಲ್ಲಿ ಪಾಲನ್ನು ತಪ್ಪಿಸುವ ಉದ್ದೇಶದಿಂದ ನಾನು ಸದರಿ ಆಸ್ತಿಗಳು ನನ್ನ ಸ್ವಂತ ಆಸ್ತಿಗಳ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮರು ವಿಚಾರಣೆ ಏನೂ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ